ರೈತರ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಪೂರೈಕೆ

18(72); ಶ್ರೀ ಕೋಳಿವಾಡ ಕೆ.ಬಿ. (ರಾಣೇಬೆನ್ನೂರು)

ಅ) ರೈತರ ಪಂಪ್‌ಸೆಟ್‌ಗಳಿಗೆ ಸದ್ಯ ಎಷ್ಟು ಗಂಟೆಗಳ ಕಾಲ ವಿದ್ಯುತ್ ಪೂರೈಸಲಾಗುತ್ತಿದೆ.

ಆ) ರೈತರ ಪಂಪ್ ಸೆಟ್‌ಗಳಿಗೆ 24 ಗಂಟೆಗಳ ಕಾಲ ವಿದ್ಯುತ್ ಪೂರೈಸಲು ಯೋಜನೆಗಳೇನಾದರೂ ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ ಈ ಯೋಜನೆಗಳು ಯಾವುವು, (ವಿವರ ನೀಡುವುದು)?

ಶ್ರೀ ಡಿ.ಕೆ. ಶಿವಕುಮಾರ್ (ಇಂಧನ ಸಚಿವರು)

ಅ) ಪ್ರಸ್ತುತ ಗ್ರಾಮೀಣ ಪ್ರದೇಶಗಳ ರೈತರ ಪಂಪ್‌ಸೆಟ್‌ಗಳಿಗೆ ದಿನವಹಿ 6 ಘಂಟೆಗಳ 3 ಫೇಸ್ ವಿದ್ಯುತ್ (ಹಗಲಿನಲ್ಲಿ 4 ಘಂಟೆಗಳು ಮತ್ತು ರಾತ್ರಿ ವೇಳೆಯಲ್ಲಿ 2 ಘಂಟೆಗಳು) ಬ್ಯಾಚ್‌ಗಳಲ್ಲಿ ಪೂರೈಸುತ್ತಿರುವುದರ ಜೊತೆಗೆ ದಿನಾಂಕ: 22-01-2014 ರಿಂದ ಜಾರಿಗೆ ಬರುವಂತೆ ರಾತ್ರಿ ವೇಳೆಯಲ್ಲಿ 1 ಘಂಟೆ ಕಾಲ ಹೆಚ್ಚುವರಿ ಅವಧಿಯ 3 ಫೇಸ್ ವಿದ್ಯುತ್ತನ್ನು ಪೂರೈಸುವಂತೆ ಆದೇಶಿಸಲಾಗಿದೆ. ಹೀಗಾಗಿ ಗ್ರಾಮೀಣ ಪ್ರದೇಶಗಳ ರೈತರ ಕೃಷಿ ಪಂಪ್‌ಸೆಟ್‌ಗಳಿಗೆ ದಿನವಹಿ ಒಟ್ಟಾರೆ 7 ಘಂಟೆಗಳ ವಿದ್ಯುತ್ ಪೂರೈಕೆಯಾಗಲಿದೆ.

ಆ) ರೈತರ ಪಂಪ್‌ಸೆಟ್‌ಗಳಿಗೆ 24 ಗಂಟೆಗಳ ಕಾಲ ವಿದ್ಯುತ್ ಪೂರೈಸುವ ಯೋಜನೆ ಇರುವುದಿಲ್ಲ. ಆದರೆ ಗ್ರಾಮೀಣ ಭಾಗದ ವ್ಯವಸಾಯೇತರ ವಿದ್ಯುತ್ ಹೊರೆಗಳಾದ ಕುಡಿಯುವ ನೀರಿನ ಯೋಜನೆಗಳು, ಗೃಹಬಳಕೆ ಸ್ಥಾವರಗಳು, ಗುಡಿಕೈಗಾರಿಕೆಗಳು ಹಾಗೂ ಇತರೆ ಸ್ಥಾವರಗಳಿಗೆ ದಿನನಿತ್ಯ 24 ಗಂಟೆಗಳ ವಿದ್ಯುತ್ ಪೂರೈಕೆಗೆ ಸರ್ಕಾರವು ನಿರಂತರ ಜ್ಯೋತಿ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿದೆ.

ಶ್ರೀ ಕೋಳಿವಾಡ ಕೆ.ಬಿ.:– ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ರೈತರಿಗೆ ಒಂದು ಗಂಟೆಗಳ ಕಾಲ ವಿದ್ಯುತ್ ಅನ್ನು ಹೆಚ್ಚು ಕೊಡುತ್ತೇವೆಂದು ಉತ್ತರ ಕೊಟ್ಟಿದ್ದಾರೆ. ಕನಿಷ್ಠ ರೈತರಿಗೆ 10 ಗಂಟೆಗಳ ಕಾಲವಾದರೂ ಸಹಿತ ವಿದ್ಯುತ್ ಕೊಡುವಂತಹ ವ್ಯವಸ್ಥೆಯನ್ನು ಮಾಡಬೇಕು. 7 ಗಂಟೆಗಳ ಕಾಲ uninterrupted ಯಾವುದೇ ಅಡೆತಡೆಯಿಲ್ಲದೆ ವಿದ್ಯುತ್ ಕೊಟ್ಟರೆ ಅನುಕೂಲವಾಗುತ್ತದೆ. ಒಂದು ತಾಸು ವಿದ್ಯುತ್ ಬರುವುದು ಮತ್ತೆ ವಿದ್ಯುತ್ ಹೊಗುವುದು switch off ಆಗುವುದು, unload ಆಗುವುದು ಇವೆಲ್ಲವೂ ಆಗುತ್ತದೆ, ಇದು ಆಗಬಾರದು. ರೈತರ ಪಂಪುಸೆಟ್ಟುಗಳಿಗೆ 24 ಗಂಟೆಗಳ ಕಾಲ ವಿದ್ಯುತ್ ಪೂರೈಸುವಂತಹ ಯೋಜನೆ ಇರುವುದಿಲ್ಲವೆಂದು ಹೇಳುತ್ತೀರಿ. ಯೋಜನೆ ಇಲ್ಲದೆ ಇದ್ದರೂ ಯೋಚನೆ ಏನಾದರೂ ಇದೆಯಾ? ಈ ಬಗ್ಗೆ ಮುಂದೇ ಏನಾದರೂ ಮಾಡಬೇಕೆಂಬ ವಿಚಾರಧಾರೆಯಾದರೂ ಇದೆಯಾ? ಈ ಯೋಜನೆಯನ್ನು ಯಾವಾಗ ಪ್ರಾರಂಭ ಮಾಡುತ್ತೀರಿ? ರೈತನ ಕಷ್ಟವನ್ನು ದೂರ ಮಾಡುವುದಕ್ಕೆ ರೈತನ ಅಭಿವೃದ್ಧಿಯೇ ದೇಶದ ಅಭಿವೃದ್ಧಿ ಎನ್ನುವುದು ತಾವೆಲ್ಲರೂ ಹೇಳುತ್ತಿರುವಾಗ ಇದನ್ನು ತಾವು ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ ಎನ್ನುವುದರ ಬಗ್ಗೆ ನಾನು ಕೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಡಿ.ಕೆ. ಶಿವಕುಮಾರ್:– ಮಾನ್ಯ ಕೋಳಿವಾಡ್‌ರವರು ಬಹಳ ಹಿರಿಯ ಸದಸ್ಯರಾಗಿದ್ದಾರೆ. ರೈತರಾಗಿದ್ದಾರೆ. ಎಷ್ಟು ದಿನ ನಮ್ಮ ಸರ್ಕಾರವು 6 ಗಂಟೆಗಳ ಕಾಲ ವಿದ್ಯುತ್ ಕೊಡುತ್ತೇವೆನ್ನುವುದರ ಬಗ್ಗೆ ನಿನ್ನೆಯಿಂದಲೇ ನಮ್ಮ ಸರ್ಕಾರವು ಕೌನ್ಸಿಲ್ ನಲ್ಲಿ announce ಮಾಡಿ ಒಂದು ಗಂಟೆ extend ಮಾಡಿದ್ದೇವೆ. ಇವತ್ತಿನ ಪರಿಸ್ಥಿತಿಯನ್ನು ಅನುಗುಣ ಮಾಡಿಕೊಂಡು KREC ಯನ್ನು ವಿಶ್ವಾಸಕ್ಕೆ ತೆಗೆದುಕೊಂಡು ಅವರ ಅನುಮತಿಯನ್ನು ಪಡೆದುಕೊಂಡು 7 ಗಂಟೆಗಳ ಕಾಲ ವಿದ್ಯುತ್ ಕೊಡುವುದರ ಬಗ್ಗೆ extend ಮಾಡಿದ್ದೇವೆ. ಮಾನ್ಯ ಸದಸ್ಯರು 24 ಗಂಟೆಗಳ ಕಾಲ ವಿದ್ಯುತ್ ಕೊಡುವುದಕ್ಕೆ ಸಾಧ್ಯವೇ ಎಂದು ಕೇಳುತ್ತಿದ್ದಾರೆ ಎಂಬ ಪ್ರಶ್ನೆಯನ್ನು ಮಾಡುತ್ತಿದ್ದಾರೆ. ಖಂಡಿತವಾಗಿ ಯಾರು ರೈತರು ಯಾರ್ಯಾರು H.T. Line ತೆಗೆದುಕೊಳ್ಳುತ್ತಾರೆ. ಯಾರ್ಯಾರು ಈ

ಬಗ್ಗೆ ಮುಂದೆ ಬರುತ್ತಾರೆ ಯಾರು commercial 10 HP ಗಿಂತ ಜಾಸ್ತಿ ತೆಗೆದುಕೊಳ್ಳುತ್ತಾರೆ. ಅಂತಹವರಿಗೆ ನಾವು ಖಂಡಿತವಾಗಿಯೂ 24 ಗಂಟೆಗಳ ಕಾಲ ಯಾರು ಹಣವನ್ನು ಕಟ್ಟುತ್ತಾರೆ ಅವರಿಗೆ ವಿದ್ಯುತ್ ಕೊಡುವುದಕ್ಕೆ ನಾವು ಬದ್ಧರಾಗಿದ್ದೇವೆ. ಈ ಬಗ್ಗೆ ನಾವು scheme ತರುವುದರ ಬಗ್ಗೆ ಯೋಚನೆ ಮಾಡಿದ್ದೇವೆ.

ಅಧ್ಯಕ್ಷರು:– 24 ಗಂಟೆಗಳ ಕಾಲ ವಿದ್ಯುತ್ ಕೊಡಿ ಎಂದು ಕೇಳುತ್ತಿದ್ದಾರೆ. ಹಾಗಾದರೆ, ರೈತರು 24 ಗಂಟೆಗಳ ಕಾಲ ಅಲ್ಲಿಯೇ ಮಲಗಿರುತ್ತಾರೆಯೇ? ಇದು Impracticable ಆಗಿದೆ. Human being ರೀತಿ ಇಲ್ಲ.

ಶ್ರೀ ಡಿ.ಕೆ. ಶಿವಕುಮಾರ್:– ಒಬ್ಬ Progressive farmer ಯಾವುದೇ crop ಅನ್ನು ಬೆಳೆದುಕೊಳ್ಳಲಿ ಅವನಿಗೆ ವಿದ್ಯುತ್ ಸಿಗಬೇಕೆಂದರೆ ಖಂಡಿತವಾಗಿಯೂ ಕೊಡುತ್ತೇವೆ. ನಾವು ಬೇರೆಯವರಿಗೆ ಏನು facilities ಒದಗಿಸಿಕೊಡುತ್ತಿದ್ದೇವೆಯೋ ಅದೇ ರೀತಿ ದುಡ್ಡು ಕೊಡುವವನಿಗೆ ಖಂಡಿತವಾಗಿಯೂ encourage ಮಾಡುತ್ತೇವೆ. ಈ ಬಗ್ಗೆ ಒಂದು scheme ಅನ್ನು ಕೂಡ ಖಂಡಿತವಾಗಿತಮ್ಮ ಮುಂದೆ ಸದ್ಯದಲ್ಲಿಯೇ ನಾವು ತರುತ್ತೇವೆ.

ಶ್ರೀ ಕೋಳಿವಾಡ ಕೆ.ಬಿ.:– ಕನಿಷ್ಠ 10 ಗಂಟೆಗಳ ಕಾಲ ವಿದ್ಯುತ್ ಕೊಡುವುದರ ಬಗ್ಗೆ ಸರ್ಕಾರ ಪ್ರಯತ್ನ ಮಾಡುತ್ತಿದೆಯಾ? ವಿದ್ಯುತ್ ಕೊಟ್ಟರೆ ರೈತರಿಗೆ ಬಹಳ ಅನುಕೂಲವಾಗುತ್ತದೆ. ಆ ದಿಸೆಯಲ್ಲಿ ಸರ್ಕಾರವು ಯೋಚನೆ ಮಾಡಬೇಕೆಂದು ನಾನು ಸರ್ಕಾರಕ್ಕೆ ಸಲಹೆಯನ್ನು ಕೊಡುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಡಿ.ಕೆ. ಶಿವಕುಮಾರ್:– ಮೊನ್ನೆ ತಾನೆ ನಾವು ಒಂದು ಗಂಟೆ extra ವಿದ್ಯುತ್ ಕೊಡುವುದರ ಬಗ್ಗೆ ಮಾಡಿದ್ದೇವೆ. ಮಳೆರಾಯ, ಆರ್ಥಿಕ ಪರಿಸ್ಥಿತಿ, Regulatory Authority, ಇವೆಲ್ಲವನ್ನೂ ಸಹ ನಾವು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಈಗಾಗಲೇ ಕರ್ನಾಟಕ ಸರ್ಕಾರವು 6,200 ಕೋಟಿ ರೂಪಾಯಿಗಳ ಹಣವನ್ನು ರೈತನ ಸಬ್ಸಿಡಿಗೋಸ್ಕರ ಕೊಡುತ್ತಿದ್ದೇವೆ.

ಒಬ್ಬ ರೈತನಿಗೆ infrastructure ಗೆ ಒಂದೂವರೆ ಲಕ್ಷ ರೂಪಾಯಿಗಳನ್ನು ನಾವು invest ಮಾಡುತ್ತಿದ್ದೇವೆ. 10 ಹೆಚ್.ಪಿ.ಗೆ ಸುಮಾರು 25–30 ಸಾವಿರ ರೂಪಾಯಿಗಳ ಬಿಲ್ ಅನ್ನು ಪ್ರತಿ ವರ್ಷ ಒಬ್ಬ ರೈತನಿಗೆ ಕೊಡುತ್ತಿದ್ದೇವೆ. ಇದನ್ನು ನಾವು ಸದ್ಯದ ಪರಿಸ್ಥಿತಿಯಲ್ಲಿ ಕೊಡುತ್ತಿದ್ದೇವೆ. ಮುಂದೆ ಈ ರಾಜ್ಯಕ್ಕೆ ಶಕ್ತಿ ಜಾಸ್ತಿ ಬಂದರೆ ಆ ರೈತನ ಶಕ್ತಿಯನ್ನು ಸಹ ನಾವು ಜಾಸ್ತಿ ಮಾಡುತ್ತೇವೆ.

ಅಧ್ಯಕ್ಷರು:– ಸಾಕು, ರಾಯರೆಡ್ಡಿ ಅದರಲ್ಲಿ ನೀವು ಕೇಳುವಂಥದ್ದು ಏನೂ ಇಲ್ಲ.

ಶ್ರೀ ಬಸವರಾಜ ರಾಯರೆಡ್ಡಿ:– ಈ ಪ್ರಶ್ನೆಗೆ ಸಂಬಂಧಿಸಿದಂತೆ ನನ್ನದೊಂದು ಉಪ ಪ್ರಶ್ನೆ ಇದೆ, ರೈತರು ಹೆಚ್ಚುವರಿ ಹಣ ಕೊಡುವುದಾದರೆ ವಿದ್ಯುತ್ ಕೊಡುತ್ತೇವೆಂದು ಹೇಳಿದರು. ನನ್ನ ಮೂಲ ಪ್ರಶ್ನೆ ಇಷ್ಟೇ. ರೈತರು ಕರ್ನಾಟಕದಲ್ಲಿ ಹಣ ಕೊಡುವಂಥ ಪರಿಸ್ಥಿತಿಯಲ್ಲಿ ಇದ್ದಾರೆಯೇ? ಅದನ್ನು ಸ್ವಲ್ಪ ಗಂಭೀರವಾಗಿ ಯೋಚನೆ ಮಾಡಬೇಕು. ಎರಡನೆಯದಾಗಿ ನಿಮಗೆ ಕೊಡಲಿಕ್ಕೆ power ಎಲ್ಲಿದೆ? Power ಕೊರತೆ ಇದೆ. ಆ ಕೊರತೆಯನ್ನು ನಿಭಾಯಿಸಲಿಕ್ಕೆ 3,880 ಮೆಗಾವ್ಯಾಟ್ ತಯಾರು ಮಾಡಬೇಕೆಂದು ಹೇಳಿದ್ದೀರಿ. ಅದನ್ನು ತಯಾರು ಮಾಡಿದ ಮೇಲೆ ತಾನೆ ಸಾಧ್ಯ? ಅದಕ್ಕೆ ಮಾನ್ಯ ಮಂತ್ರಿಗಳಿಗೆ ನಾನು ಇಷ್ಟೇ ಹೇಳಬಯಸುತ್ತೇನೆ. ತ್ವರಿತವಾಗಿ ವಿದ್ಯುತ್ ಉತ್ಪಾದನೆಯನ್ನು ಮಾಡದೆ ಹೊರತು ಕರ್ನಾಟಕದಲ್ಲಿ ನೀರಾವರಿಗೆ, 24 ಗಂಟೆ ಕೊಡಲಿಕ್ಕೆ ಸಾಧ್ಯವಿಲ್ಲ. ವಿದ್ಯುತ್ ಇದೆಯೇ ಎಂಬ ಬಗ್ಗೆ ಮಾನ್ಯ ಇಂಧನ ಸಚಿವರು clarify ಮಾಡಬೇಕೆಂದು ಕೇಳುತ್ತೇನೆ.

ಶ್ರೀ ಡಿ.ಕೆ. ಶಿವಕುಮಾರ್ (ಮಾನ್ಯ ಇಂಧನ ಸಚಿವರು):– ಅದರ ಬಗ್ಗೆ ಒಂದು ಡಿಬೇಟ್ ಪ್ರಾರಂಭ ಮಾಡಿದಾಗ ಸಮರ್ಪಕವಾಗಿ ಚರ್ಚೆ ಮಾಡೋಣ.

ಅಧ್ಯಕ್ಷರು:– ಶ್ರೀ ವಿಶ್ವನಾಥ ಎಸ್.ಆರ್., ಇಲ್ಲ, ಶ್ರೀ ಗುರು ಪಾಟೀಲ ಶಿರವಾಳ ಇಲ್ಲ, ಶ್ರೀ ವಿಶ್ವನಾಥ್ ಚಂದ್ರಶೇಖರ್ ಮಾಮನಿ ಇಲ್ಲ, ಶ್ರೀ ಐಹೊಳೆ ಡಿ. ಮಹಾಲಿಂಗಪ್ಪ ಪ್ರಶ್ನೆ ಕೇಳಿ.